**ಓ ಎಸ್ ನಂಃ 92-18**
**ಪಿ ಡಬ್ಲ್ಯೂ ಃ 1**

**ದಿಃ 12-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 7 ರವರ ಪರ ಶ್ರೀ ಹೆಚ್ ಎನ್ ಎಸ್ ವಕೀಲರಿಂದ**

18. ದಾವಾ ಸ್ವತ್ತುಗಳ ಪೋಡಿಯಾಗಿರುವ ವಿಚಾರ ನಾನು ಎಲ್ಲೂ ತಿಳಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ಸರ್ವೆ ನಂ 9/2 ನಾಲ್ಕು ಪೋಡಿಗಳು ಆಗಿರುತ್ತವೆ ಎಂದರೆ ಗೊತ್ತಿಲ್ಲ. ನಾನು ಪೋಡಿಯಾಗಿರುವ ಪಹಣಿ ಪತ್ರಿಕೆಗಳು ನಿಪಿ 6 ರಿಂದ 9 ರವರೆಗೂ ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ಸದರಿ ಪಹಣಿಗಳಲ್ಲಿ ಹೇಗೆ ಪೋಡಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ನಾನು ದಾವಾ ಹೂಡುವ ಸಮಯಕ್ಕೆ ನಾಲ್ಕು ಪೋಡಿಗಳಾಗಿದ್ದು ನಾನು ಅದನ್ನು ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಂ ಆರ್ ನಂ 3/2002-03 ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ, ಸದರಿ ನಿಪಿ 6 ಪಹಣಿಯಲ್ಲಿ ದಾವಾ ಸ್ವತ್ತನ್ನು ಬ್ಯಾಂಕಿನಲ್ಲಿ ಆಧಾರ ಹಿಡಲಾಗಿರುತ್ತದೆ ಎಂದು ಹೇಳಲಾಗಿರುತ್ತದೆ ಎಂದರೆ ನಿಪಿ 6 ರಲ್ಲಿರಬಹುದು ನಾವೇನೂ ಸದರಿ ಸ್ವತ್ತನ್ನು ಆಧಾರ ಮಾಡಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**